ಕರಾವಳಿ ಮುಂಜಾವು

13 ಜುಲೈ 2014 ರವಿವಾರ

# ಶ್ರೀಕೃಷ್ಣ ಮಿಲ್ಕ್ಸ್ ಬೆಳ್ಳಿಹಬ್ಬದ ಸಮಾರಂಭ




ಯಲ್ಲಾಪುರ ಶ್ರೀಕೃಷ್ಣ ಮಿಲ್ಕ್ಸ್ ನರವರ 25 ವರ್ಷಗಳ ಸೇವೆ ಪೂರೈಸಿದ ಸಮಾರಂಭವು ಹೊಟೆಲ್ ಡೆನಿಸನ್ಸ, ಹುಬ್ಬಳ್ಳಿಯಲ್ಲಿ ವಿಜೃಂಭಣೆಯಿಂದ ಜರುಗಿತು.

ಈ ಸಮಾರಂಭದಲ್ಲಿ ನಗರದ ಅನೇಕ ಗಣ್ಯರು ಹಾಗೂ ಶ್ರೀಕೃಷ್ಣ ಸಂಸ್ಥೆಯ ಸಿಬ್ಬಂದಿ ಹಾಗೂ ಹಾಲು ಮಾರಾಟದ ಡಿಸ್ಟ್ರಿಬ್ಯೂಟರ್ಸ್, ರಿಟೇಲರ್ಸ್ ಮುಂತಾದವರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ನೂತನ ಉತ್ಪಾದನೆಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು. ಈ ಸಮಾರಂಭದಲ್ಲಿ ಪಾಲ್ಗೊಂಡವರಲ್ಲಿ ಸಂಸ್ಥೆಯ ನಿರ್ದೇಶಕ ಪ್ರದೀಪ ಪೈ, ದಿನೇಶ ಆರ್. ಪೈ, ಮುಖ್ಯ ಅತಿಥಿ ಶ್ರೀ ವಿವೇಕ ಪವಾರ, (ಐ.ಟಿ. ಉದ್ಯಮಿ) ಶ್ಯಾಮ ಕಾಮತ್, ಹನುಮಂತ ಎಂ. ಪೈ, ಮಹೇಶ್ ಕಾಮತ್ ಇವರೆಲ್ಲರೂ ಪಾಲ್ಗೊಂಡಿದ್ದರು.

ಯಲ್ಲಾಪುರ ತಾಲೂಕಿನ ಕಿರವತ್ತಿ ಗ್ರಾಮದಲ್ಲಿರುವ ಶ್ರೀಕೃಷ್ಣ ಮಿಲ್ಕ್ಸ್ ಇವರ ಹಾಲು ಹಾಗೂ ಹಾಲಿನ ಉತ್ಪನ್ನಗಳ ಡೇರಿಯ ಸನ್ 1989 ರಲ್ಲಿ ಪ್ರಾರಂಭವಾಗಿ ತನ್ನ 25 ವರ್ಷಗಳ ನಿರಂತರ ಹಾಲಿನ ಮಾರಾಟದ ಸೇವೆಯನ್ನು ಪೂರೈಸಿದ್ದು, ಈ ಅಂಗವಾಗಿ ಹೊಟೆಲ್ ಡೆನಿಸನ್ಸ, ಹುಬ್ಬಳ್ಳಿಯಲ್ಲಿ ಬೆಳ್ಳಿಹಬ್ಬದ ಸಮಾರಂಭವು ವಿಜೃಂಭಣೆಯಿಂದ ಜರುಗಿತು.